ಪಾನೀಯ ನಿಗಮ ನಿಯಮಿತಕ್ಕೆ ಸಂಬಂಧಿಸಿದ 123ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನು ಮಂಡಿಸಲಾಯಿತು.

3. ಅ) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: ದಿನಾಂಕ 13.02.2011ರಂದು ಮಹದೇಶ್ವರ ಬೆಟ್ಟದಲ್ಲಿ ಅಗ್ನಿದುರಂತ ಸಂಭವಿಸಿ ಸುಮಾರು 42 ಅಂಗಡಿಗಳು ಸುಟ್ಟು ಹೋಗಿ 80–85 ಲಕ್ಷ ರೂಪಾಯಿಗಳು ನಷ್ಟವಾಗಿದ್ದು ಅವರಿಗೆ ಪುನರ್ ವಸತಿ ಕಲ್ಪಿಸುವ ಬಗ್ಗೆ.

ಶ್ರೀ ಆರ್. ನರೇಂದ್ರ (ಹನೂರು): ಮಾನ್ಯ ಅಧ್ಯಕ್ಷರೆ, ಕಳೆದ ತಿಂಗಳು 13.2.2011ರಂದು ಮಹದೇಶ್ವರ ಬೆಟ್ಟದಲ್ಲಿ ಅಗ್ನಿ ದುರಂತ ಸಂಭವಿಸಿ ಸುಮಾರು 42 ಅಂಗಡಿಗಳು ಸುಟ್ಟು ಹೋಗಿವೆ. ಸುಮಾರು 80–85 ಲಕ್ಷ ರೂ.ಗಳು ಲಾಸ್ ಆಗಿದೆ. ಒಂದು ನೋವಿನ ಸಂಗತಿ ಏನೆಂದರೆ, 42 ಅಂಗಡಿಗಳು ಅಗ್ನಿ ದುರಂತ ಆಗಿ ಅವರ ಕುಟುಂಬದವರು ಬೀದಿಯಲ್ಲಿ ಕುಳಿತಾಗ ಜಿಲ್ಲಾಡಳಿತದವರು ಒಬ್ಬರೂ ಬಂದು ಅವರಿಗೆ ಬೇಕಾದ ಮೂಲಭೂತ ಸೌಕರ್ಯಗಳಾದ ಬಟ್ಟೆ–ಬರೆ ಅಥವಾ 4 ದಿವಸ ಊಟಕ್ಕೆ ಏನು ನೋಡಲಿಲ್ಲ. ಅವರು ಬಹಳ ಕಷ್ಟದಲ್ಲಿದ್ದಾರೆ. ಆ 42 ಅಂಗಡಿಗಳವರು 80–85 ಲಕ್ಷ ರೂ.ಗಳನ್ನು ಕಳೆದುಕೊಂಡಿದ್ದಾರೆ. ಅವರಿಗೆ ಪುನರ್ ವಸತಿ ಕಲ್ಪಿಸಿಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ವರದಿಯನ್ನು ಜಿಲ್ಲಾಧಿಕಾರಿಗಳಿಂದ ತರಿಸಿಕೊಂಡಿರುತ್ತೇನೆ. ಕೊಳ್ಳೆಗಾಲ ತಾಲ್ಲೂಕು ರಾಂಪುರ ಹೋಬಳಿ ಮಹದೇಶ್ವರ ಬೆಟ್ಟಕ್ಕೆ ಸೇರಿದಂಥ 42 ಅಂಗಡಿಗಳಿಗೆ ದಿನಾಂಕ: 13.2.2011ರಂದು ಆಕಸ್ಮಿಕವಾಗಿ ಅಗ್ನಿ ದುರಂತದಿಂದ ನಾಶವಾಗಿದೆ. ಪರಿಹಾರವನ್ನು ಕೇಳಿದ್ದಾರೆ. ಈ ರೀತಿ ಬೆಂಕಿ ಆಕಸ್ಮಿಕವಾಗಿ ಬಿದ್ದಾಗ ಪರಿಹಾರ ಕೊಡುವಂಥದ್ದು ಸಾಮಾನ್ಯವಾಗಿ ಇಲ್ಲ. ಆದರೆ ಇದು ವಿಶೇಷವಾದ ಸಂದರ್ಭವೆಂದು ಪರಿಗಣಿಸಿ ಈ 42 ಜನರಿಗೆ ತಕ್ಷಣ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಒಬ್ಬೊಬ್ಬರಿಗೆ 25,000 ರೂ.ಗಳನ್ನು ತಕ್ಷಣ ತಾತ್ಕಾಲಿಕವಾಗಿ ಪರಿಹಾರ ಕೊಡಬೇಕೆಂದು ಸೂಚನೆ ಕೊಟ್ಟು ಹಣವನ್ನು ತಲುಪಿಸುತ್ತೇನೆ.

ಆ) ವಿಷಯ: ಮೂಡಿಗೆರೆ ತಾಲ್ಲೂಕಿನಲ್ಲಿ ಬರುವ ಜಮೀನುಗಳನ್ನು ಅರಣ್ಯ ಇಲಾಖೆ ಮತ್ತು ಗೋಮಾಳ ಜಮೀನುಗಳನ್ನು ಡೀಮ್ಡ್ ಫಾರೆಸ್ಟ್ ಎಂದು ಹೇಳಿ ತೀರ್ಮಾನ ಮಾಡಿರುವುದು ಹಾಗೂ ಕೆಲವು ಜಮೀನುಗಳಿಗೆ ಹಕ್ಕು